ಶ್ರೇಣಿಯ ಕಂಡಿಕೆ 14 ರಲ್ಲಿ ಪಿಹೆಚ್‌ಡಿ/ಎಂಫಿಲ್ ಮತ್ತಿತರ ಉನ್ನತ ವಿದ್ಯಾರ್ಹತೆಗಳಿಗೆ ವೇತನ ಬಡ್ತಿಗಳನ್ನು ಮಂಜೂರು ಮಾಡುವ ಕುರಿತಂತೆ ಯುಜಿಸಿಯಿಂದ ಸ್ಪಷ್ಟೀಕರಣವನ್ನು ಕೋರಲಾಗಿದೆಯೆಂದು ತಿಳಿಸಿದ್ದು, ಯುಜಿಸಿಯ ಸ್ಪಷ್ಟೀಕರಣ ಸ್ವೀಕೃತವಾದ ನಂತರದಲ್ಲಿ ಈ ಕುರಿತಂತೆ ಸೂಕ್ತ ನಿರ್ದೇಶನಗಳನ್ನು ಆಳವಡಿಸಲಾಗುವುದೆಂದು ತಿಳಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ ಪ್ರಸ್ತುತ ದಿನಾಂಕ:01/01/2016 ಮತ್ತು ತದನಂತರದಲ್ಲಿ ನೇಮಕಾತಿ ಹೊಂದಿದ್ದು, ನೇಮಕಾತಿ ಪೂರ್ವದಲ್ಲಿ ಪಿಹೆಚ್‌ಡಿ/ಎಂಫಿಲ್ ಪದವಿ ಪಡೆದಿರುವ ಉಪನ್ಯಾಸಕರುಗಳಿಗೆ ಹಾಗೂ ಸೇವೆಯಲ್ಲಿದ್ದು ದಿನಾಂಕ:01/01/2016ರ ನಂತರ ಪಿಹೆಚ್‌ಡಿ/ಎಂಫಿಲ್ ಪದವಿ ಪಡೆದಿರುವ ಉಪನ್ಯಾಸಕರುಗಳಿಗೆ 2016ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯನ್ವಯ ಸೂಕ್ತ ನಿಯಮವನ್ನು ಆಳವಡಿಸಿದ ನಂತರದಲ್ಲಿ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳುವ ಬಗ್ಗೆ ಸರ್ಕಾರದ ಮಾರ್ಗದರ್ಶನವನ್ನು ಈ ಕಛೇರಿಯ ಸಮ ಸಂಖ್ಯೆಯ ಪತ್ರ ದಿನಾಂಕ:08-05-2019ರಲ್ಲಿ ಕೋರಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಈಗಾಗಲೇ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡಲು ಹೊರಡಿಸಲಾದ ಈ ಕಛೇರಿಯ ವಿವಿಧ ಆದೇಶಗಳಲ್ಲಿ ದಿನಾಂಕ:01-01-2016 ರಂದು ಅಥವಾ ತದನಂತರ ನೇಮಕಾತಿ ಹೊಂದಿರುವ ಉಪನ್ಯಾಸಕರುಗಳಿಗೆ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡಿದ್ದಲ್ಲಿ ಅಥವಾ ದಿನಾಂಕ:01-01-2016 ರಂದು ಅಥವಾ ತದನಂತರ ಪಿ.ಹೆಚ್.ಡಿ ಪದವಿಯನ್ನು ಪಡೆದ ಕಾರಣ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡಲಾದ ಪ್ರಕರಣಗಳಲ್ಲಿ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗಳ ಸೌಲಭ್ಯವನ್ನು ನೀಡಲಾಗುತ್ತಿರುವುದನ್ನು ಮುಂದಿನ ಆದೇಶದವರೆಗೆ ತಡೆಹಿಡಿಯುವಂತೆ ಪ್ರಾಂಶುಪಾಲರುಗಳಿಗೆ ಸೂಚನೆ ನೀಡಲಾಗಿದೆ. ಸರ್ಕಾರದಿಂದ ಮಾರ್ಗದರ್ಶನ ಬಂದ ನಂತರದಲ್ಲಿ ಈ ಬಗ್ಗೆ ಸೂಕ್ತ ನಿರ್ದೇಶನವನ್ನು ನೀಡಲಾಗುವುದು. ಈಗಾಗಲೇ ನೀಡಲಾಗಿರುವ ಆರ್ಥಿಕ ಸೌಲಭ್ಯವನ್ನು ಹಿಂಪಡೆಯದಂತೆ ಕೂಡ ಸೂಚನೆಯನ್ನು ನೀಡಲಾಗಿದೆ.

ಕಾಲೇಜು ಶಿಕ್ಷಣ ಆಯುಕ್ತರು

ಇವರಿಗೆ:

1) ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ಕಲಬುರಗಿ–ಅಗತ್ಯ ಕ್ರಮಕ್ಕಾಗಿ.
2) ಪ್ರಾಂಶುಪಾಲರುಗಳು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಹಾಗೂ ಸರ್ಕಾರಿ ಕಾನೂನು ಕಾಲೇಜುಗಳು–ಅಗತ್ಯ ಕ್ರಮಕ್ಕಾಗಿ.
3) ಕಛೇರಿ ಪ್ರತಿ.

ಪ್ರತಿಯನ್ನು:

1) ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು– ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
2) ಕಛೇರಿ ಪ್ರತಿ.

**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ/260/ಪಿಹೆಚ್‌ಡಿ/ಎಂಫಿಲ್/2016-17/ಸೇವಿ-1 ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:16-5-2019.

**ಸುತ್ತೋಲೆ**

ವಿಷಯ: ಯುಜಿಸಿ ವೇತನ ಶ್ರೇಣಿಯನ್ವಯ ಉಪನ್ಯಾಸಕರು, ಗ್ರಂಥಪಾಲಕರು ಮತ್ತು ದೈಹಿಕ ಶಿಕ್ಷಣ ಬೋಧಕರುಗಳಿಗೆ ಪಿ.ಹೆಚ್.ಡಿ/ಎಂ.ಫಿಲ್ ಪದವಿ ಪಡೆದ ಪ್ರಯುಕ್ತ ಮುಂಗಡ ವೇತನ ಬಡ್ತಿಗಳನ್ನು ನೀಡುವ ಕುರಿತು.

ಉಲ್ಲೇಖ:
1) ಸರ್ಕಾರದ ಪತ್ರ ಸಂಖ್ಯೆ:ಇಡಿ/195/ಡಿಸಿಇ 2014, ದಿನಾಂಕ:17-01-2019.
2) ಸರ್ಕಾರದ ಆದೇಶ ಸಂಖ್ಯೆ: ಇಡಿ 483 ಯುಎನ್‌ಇ 2017 ಬೆಂಗಳೂರು ದಿನಾಂಕ:16/03/2019.
3) ಈ ಕಛೇರಿ ಸುತ್ತೋಲೆ ಸಮ ಸಂಖ್ಯೆಯ ದಿನಾಂಕ:08-05-2019

*****

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಯುಜಿಸಿ ವೇತನ ಶ್ರೇಣಿ ಪಡೆಯುತ್ತಿರುವ ಬೋಧಕ ವರ್ಗದವರು ಎಂ.ಫಿಲ್/ಪಿ.ಹೆಚ್.ಡಿ ಪದವಿ ಪಡೆದಿರುವುದಕ್ಕೆ 1996 ರ ಮತ್ತು 2006ರ ಯು.ಜಿ.ಸಿ. ವೇತನ ಶ್ರೇಣಿಗಳಲ್ಲಿ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡುವ ಕುರಿತಂತೆ ಉಲ್ಲೇಖ (1)ರ ಸರ್ಕಾರದ ಪತ್ರದಲ್ಲಿ ಮಾರ್ಗದರ್ಶನವನ್ನು ನೀಡಲಾಗಿರುತ್ತದೆ.

ಸದರಿ ಪತ್ರದಲ್ಲಿ ಈ ಕೆಳಗಿನಂತೆ ತಿಳಿಸಲಾಗಿರುತ್ತದೆ.

> "In view of the embargo in para 7 & para 10 of G.O.dated:15-11-1999 and 24-12-2009 on grant of these incentives retrospectively from the date of implementation of 1996 and 2006 Revised UGC Pay Scales, a teacher is entitled to the benefit of advance increments of possessing M.Phil/Ph.D in such number and at such rates as is admissible as per the provisions existing at the time of recruitment. Further, an in service teacher who acquires the said higher qualification after his appointment is also eligible to get the benefit of advance increments as per the provisions of the Rule existing at the time of such acquisition of higher qualification."

ಈ ಮೇಲಿನ ನಿರ್ದೇಶನದಂತೆ, ಉಪನ್ಯಾಸಕರುಗಳು ನೇಮಕ ಹೊಂದುವ ಸಮಯಕ್ಕೆ ಅನ್ವಯವಾಗುವ ಹಾಗೂ ಸೇವಾನಿರತ ಉಪನ್ಯಾಸಕರುಗಳಿಗೆ ಅವರುಗಳು ಪಿ.ಹೆಚ್.ಡಿ ಪಡೆದ ದಿನಾಂಕದಂದು ಅನ್ವಯವಾಗುವ ವೇತನ ಶ್ರೇಣಿಯಲ್ಲಿ ನಿಗದಿಪಡಿಸಲಾಗಿರುವ ದರ ಮತ್ತು ಸಂಖ್ಯೆಗಳಲ್ಲಿ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡಬಹುದಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಇಡಿ 483 ಯುಎನ್‌ಇ 2017 ಬೆಂಗಳೂರು ದಿನಾಂಕ:16/03/2019ರನ್ವಯ ಜಾರಿಗೊಳಿಸಲಾಗಿರುವ 2016ರ ಪರಿಷ್ಕೃತ ಯುಜಿಸಿ ವೇತನ